# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 495

ಮಾನ್ಯ ಸದಸ್ಯರ ಹೆಸರು : ಶ್ರೀ ಎಂ.ನಾಗರಾಜು

(ವಿಧಾನಸಭಾ ಕ್ಷೇತ್ರ)

ಉತ್ತರಿಸುವ ದಿನಾಂಕ : 11.12.2025

ಉತ್ತರಿಸುವ ಸಚಿವರು : ಅಬಕಾರಿ ಸಚಿವರು

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2024-25,2025-26 ನೇ ಸಾಲಿನಲ್ಲಿ (ನವೆಂಬರ್ 2025 ರವರೆಗೆ) ರಾಜ್ಯದಲ್ಲಿ ಎಷ್ಟು ಅಬಕಾರಿ ತೆರಿಗೆ ಸಂಗ್ರಹಿಸಲಾಗಿದೆ ಮತ್ತು ಮುಂಬರುವ ದಿನಗಳಲ್ಲಿ ಈ ತೆರಿಗೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td>ಅಬಕಾರಿ ಇಲಾಖೆಯಲ್ಲಿ 2024-25, 2025-26 ನೇ ಸಾಲಿನಲ್ಲಿ (ನವೆಂಬರ್ 2025 ರವರೆಗೆ) ಸಂಗ್ರಹವಾದ ತೆರಿಗೆಯ (ಅಬಕಾರಿ ರಾಜಸ್ವ) ವಿವರಗಳು ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಸಂಗ್ರಹವಾದ ತೆರಿಗೆ (ಅಬಕಾರಿ ರಾಜಸ್ವ)<br>(ರೂ. ಕೋಟಿಗಳಲ್ಲಿ)</th></tr>
<tr><td>2024-25</td><td>35,783.54</td></tr>
<tr><td>2025-26<br>(ನವೆಂಬರ್ 2025 ರವರೆಗೆ)</td><td>26,215.77</td></tr>
</table>
ಅಬಕಾರಿ ರಾಜಸ್ವವನ್ನು ಹೆಚ್ಚಿಸಲು ಸರ್ಕಾರ ಈ ಕೆಳಕಂಡ ಉಪಕ್ರಮಗಳನ್ನು ಕೈಗೊಂಡಿರುತ್ತದೆ.
<ul>
<li>ಪ್ರೀಮಿಯಂ ಮದ್ಯದ ಬೆಲೆಗಳನ್ನು ನೆರೆಯ ರಾಜ್ಯಗಳಲ್ಲಿ ವಿಧಿಸುತ್ತಿರುವ ಬೆಲೆಗಳಿಗೆ ಅನುಸಾರವಾಗಿ ಪರಿಷ್ಕರಿಸುವುದರೊಂದಿಗೆ ಅಬಕಾರಿ ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸಲಾಗಿದೆ.</li>
<li>2025-26ನೇ ಅಬಕಾರಿ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ:FD 06 PES 2025 ದಿನಾಂಕ:23.06.2025 ರನ್ವಯ</li>
</ul></td></tr>
</table>

| | | |
|---|---|---|
| | | ಪ್ರಸ್ತುತ ಇರುವ ಎಲ್ಲಾ ಸನ್ನದುಗಳ ಸನ್ನದು ಶುಲ್ಕದ ಮೇಲೆ ಶೇ.50 ರಷ್ಟು ಶುಲ್ಕ ಹೆಚ್ಚಳ ಮಾಡಲಾಗಿರುತ್ತದೆ.<br>• ಸ್ಥಗಿತಗೊಂಡ ಸಿಎಲ್-2 ಸನ್ನದುಗಳು, 1987ರ ಕೋಟಾದ ಪ್ರಕಾರ ಇನ್ನೂ ಮಂಜೂರು ಮಾಡಬೇಕಾದ ಸಿಎಲ್-2 ಸನ್ನದುಗಳು, ಸ್ಥಗಿತಗೊಂಡಿರುವ ಸಿಎಲ್-9 ಸನ್ನದುಗಳು, ಸ್ಥಗಿತಗೊಂಡ ಸಿಎಲ್(11-ಸಿ) ಸನ್ನದುಗಳು,ಅಬಕಾರಿ ಆಯುಕ್ತರಿಂದ ಪೂರ್ವಾನುಮೋದನೆ ಪಡೆದ ಆದರೆ ಇನ್ನೂ ತೆರೆಯದ ಸಿಎಲ್ (11-ಸಿ) ಸನ್ನದುಗಳನ್ನು ಪಾರದರ್ಶಕ ಎಲೆಕ್ಟ್ರಾನಿಕ್ ಹರಾಜಿನ ಮೂಲಕ ಹಂಚಿಕೆ ಮಾಡಲು ಪರಿಶೀಲಿಸಲಾಗುತ್ತದೆ.<br>• ಸರ್ಕಾರದ ಅಧಿಸೂಚನೆ ಸಂಖ್ಯೆ: FD 04 PES 2025 ದಿನಾಂಕ:13-05-2025 ರಂತೆ, ದಿನಾಂಕ:15-05-2025 ರಿಂದ ಅನ್ವಯವಾಗುವಂತೆ ಐ.ಎಂ.ಎಲ್ ಮದ್ಯದ ಮೊದಲ 3 ಸ್ಲಾಬ್‌ಗಳ ಮೇಲೆ ಎಂಆರ್‌ಪಿ ರೂ.15 ರಂತೆ ಹೆಚ್ಚಳ ಮಾಡಿ, 4ನೇ ಸ್ಲಾಬ್ ನ ಮೇಲೆ ಎಂಆರ್‌ಪಿ ರೂ.5 ಹೆಚ್ಚಳವಾಗುವಂತೆ ಹೆಚ್ಚುವರಿ ಅಬಕಾರಿ ಸುಂಕವನ್ನು (Additional Excise Duty) ಏರಿಕೆ ಮಾಡಲಾಗಿರುತ್ತದೆ.<br>• ಬಿಯರ್ ಹೆಚ್ಚುವರಿ ಅಬಕಾರಿ ಸುಂಕವನ್ನು "ಘೋಷಿತ ಬೆಲೆಯ ಶೇ.195 ಅಥವಾ ರೂ. 130 ಪ್ರತಿ ಬಲ್ಕ್ ಲೀಟರ್ ಗೆ ಇದರಲ್ಲಿ ಯಾವುದು ಹೆಚ್ಚೋ ಅದು" ಎಂಬುದನ್ನು ತಿದ್ದುಪಡಿ ಮಾಡಿ ಬಿಯರ್ ನ ಘೋಷಿತ ಬೆಲೆಯ(Declared Price)ಮೇಲೆ ಹೆಚ್ಚುವರಿ ಅಬಕಾರಿ ಸುಂಕವನ್ನು "ಘೋಷಿತ ಬೆಲೆಯ ಶೇ.200ಕ್ಕೆ" ಹೆಚ್ಚಳ ಮಾಡಲಾಗಿರುತ್ತದೆ. |
| ಆ) | ಅಬಕಾರಿ ನಿಯಂತ್ರಣ ಮತ್ತು ನಿಯಮ ಪಾಲನೆ ಸಂಬಂಧ ಪ್ರಸ್ತುತ ಚಾಲ್ತಿಯಲ್ಲಿರುವ ನಿಬಂಧನೆಗಳು ಯಾವುವು ಮತ್ತು ಈ ನಿಬಂಧನೆಗಳಲ್ಲಿ ತರಲಾಗಿರುವ ಬದಲಾವಣೆಗಳು ಯಾವುವು; | **ಕರ್ನಾಟಕ ಅಬಕಾರಿ ಕಾಯ್ದೆ, 1965 ರ ಕಲಂ 32** ರನ್ವಯ, ಅಕ್ರಮವಾಗಿ ಮದ್ಯ ತಯಾರಿಕೆ, ರಫ್ತು, ಸಾಗಾಣಿಕೆ ಮತ್ತು ಹೊಂದುವಿಕೆಯಂತಹ ಘೋರ (Heinous) ಪ್ರಕರಣಗಳಿಗೆ ಮೊದಲನೇ ಪ್ರಕರಣಕ್ಕೆ 01 ವರ್ಷ ಕಠಿಣ ಕಾರಾಗೃಹ ವಾಸ ಇರುತ್ತದೆ. ಎರಡನೇ ಹಾಗೂ ಹೆಚ್ಚಿನ ಪ್ರಕರಣಗಳು ಆ ವ್ಯಕ್ತಿಯ ವಿರುದ್ಧ ದಾಖಲಾದಲ್ಲಿ, ಶಿಕ್ಷೆಯ ಪ್ರಮಾಣವು 02 ವರ್ಷ ಕಠಿಣ ಕಾರಾಗೃಹ ವಾಸ ಹಾಗೂ ಗರಿಷ್ಟ 05 ವರ್ಷದವರೆಗೆ |

| | | |
|---|---|---|
| | | ವಿಸ್ತರಿಸಬಹುದಾದ ಕಾರಾಗೃಹ ವಾಸ ಹಾಗೂ ರೂ. 50,000/- ದಂಡ ನಿಗದಿಪಡಿಸಲಾಗಿದ್ದು, ದಿನಾಂಕ:11-04-2005 ರಿಂದ ಜಾರಿಯಲ್ಲಿರುತ್ತದೆ.<br><br>**ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 32 (4)** ರನ್ವಯ ಪರವಾನಗಿ ಇಲ್ಲದೇ ನೀರಾ ಇಳಿಸುವಿಕೆಯಂತಹ ಘೋರ (Heinous) ಪ್ರಕರಣಗಳಿಗೆ ಐದು ಪ್ರಕರಣದವರೆಗೆ ಪ್ರತಿ ಪ್ರಕರಣಕ್ಕೆ 5,000/- ದಂಡ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಪ್ರಕರಣಗಳು ಆ ವ್ಯಕ್ತಿಯ ವಿರುದ್ಧ ದಾಖಲಾದಲ್ಲಿ ತದನಂತರದ ಪ್ರಕರಣಕ್ಕೆ 06 ತಿಂಗಳ ಕಠಿಣ ಕಾರಾಗೃಹ ವಾಸ ಅಥವಾ ರೂ. 10,000/- ವರೆಗೆ ವಿಸ್ತರಿಸಬಹುದಾದ ದಂಡ ನಿಗದಿಪಡಿಸಲಾಗಿದ್ದು, ದಿನಾಂಕ: 04-01-2017 ರಿಂದ ಜಾರಿಯಲ್ಲಿರುತ್ತದೆ.<br><br>**ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 34** ರನ್ವಯ ಮದ್ಯ ತಯಾರಿಕೆ, ರಫ್ತು, ಸಾಗಾಣಿಕೆ ಮತ್ತು ಹೊಂದುವಿಕೆಯಂತಹ ಘೋರ (Heinous) ಪ್ರಕರಣಗಳಿಗೆ ಮೊದಲನೇ ಪ್ರಕರಣಕ್ಕೆ 01 ವರ್ಷ ಕಠಿಣ ಕಾರಾಗೃಹ ವಾಸ ಮತ್ತು ರೂ. 10,000/- ದಂಡ ಇರುತ್ತದೆ. ಎರಡನೇ ಹಾಗೂ ಹೆಚ್ಚಿನ ಪ್ರಕರಣಗಳು ಆ ವ್ಯಕ್ತಿಯ ವಿರುದ್ಧ ದಾಖಲಾದಲ್ಲಿ, ಶಿಕ್ಷೆಯ ಪ್ರಮಾಣವು 02 ವರ್ಷ ಕಠಿಣ ಕಾರಾಗೃಹ ವಾಸ ರೂ.20,000/- ವರೆಗೆ ವಿಸ್ತರಿಸಬಹುದಾದ ದಂಡ ಹಾಗೂ ಗರಿಷ್ಟ 04 ವರ್ಷದವರೆಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಹಾಗೂ ರೂ. 50,000/- ದಂಡ ನಿಗದಿಪಡಿಸಲಾಗಿದ್ದು, ದಿನಾಂಕ:11-04-2005ರಿಂದ ಜಾರಿಯಲ್ಲಿರುತ್ತದೆ.<br><br>**ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 38-A** ರನ್ವಯ ಯಾವುದೇ ಸ್ಥಳ, ಕೊಠಡಿ ಅಥವಾ ವಾಹನಗಳ ಮಾಲೀಕರು ತಿಳುವಳಿಕೆಯಿಂದ ಅಬಕಾರಿ ಅಕ್ರಮಗಳಲ್ಲಿ ಭಾಗಿಯಾದಲ್ಲಿ ಇದೇ ಕಾಯ್ದೆಯ ಕಲಂ 32, 33, 34, 36 ಮತ್ತು 37 ರಂತೆ ಶಿಕ್ಷೆಗೆ ಒಳಪಡಿಸಬಹುದಾಗಿದೆ. |
| ಇ) | 2024-25 ನೇ ಸಾಲಿನಲ್ಲಿ (ನವೆಂಬರ್ 2025 ರವರೆಗೆ) ಅಬಕಾರಿ ದಾಳಿ ವಿರುದ್ಧ ಹೋರಾಟ ಮತ್ತು ನಿಯಮ ಉಲ್ಲಂಘನೆ ಮಾಡುವವರ | 2024-25ನೇ ಸಾಲಿನಲ್ಲಿ (ಎಪ್ರಿಲ್ ರಿಂದ ನವೆಂಬರ್ ಮಾಹೆವರೆಗೆ) ರಾಜ್ಯಾದ್ಯಂತ ಒಟ್ಟು 44,499 ದಾಳಿಗಳನ್ನು ನಡೆಸಿ,1,957 ಜಾಮೀನಿಯವಲ್ಲದ (non-bailable) ಪ್ರಕರಣಗಳನ್ನು ಹಾಗೂ ಜಾಮೀನೀಯ ದಂಡ ವಿಧಿಸಬಹುದಾದ(bailable and |

| | | |
|---|---|---|
| | ವಿರುದ್ಧ ಕ್ರಮಗಳೇನು; ಮತ್ತು ಬೆಳಕಿಗೆ ಬಂದಿರುವ ನಿಯಮ ಉಲ್ಲಂಘನೆ ಪ್ರಕರಣಗಳು ಎಷ್ಟು; ಹಾಗೂ ಇವರ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ? (ಸಂಪೂರ್ಣ ಮಾಹಿತಿಯನ್ನು ನೀಡುವುದು); | compoundable) ಒಟ್ಟು 17,045 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.<br><br>ಸನ್ನದು ಷರತ್ತು ಉಲ್ಲಂಘನೆ ಸಂಬಂಧ ಒಟ್ಟು 9,450 ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ. ಇದೇ ಅವಧಿಯಲ್ಲಿ 18,876 ಆರೋಪಿತರನ್ನು ದಸ್ತಗಿರಿಗೊಳಪಡಿಸಿ ಒಟ್ಟು 98,231 ಲೀಟರ್ ಮದ್ಯ ಮತ್ತು 34,167 ಲೀಟರ್ ಬಿಯರ್ ಅನ್ನು ವಶಪಡಿಸಿಕೊಳ್ಳಲಾಗಿರುತ್ತದೆ.<br><br>ವರ್ಷವಾರು,ಜಿಲ್ಲಾವಾರು ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |

ಕಡತ ಸಂಖ್ಯೆ: FD 113 ELQ 2025

(ಆರ್.ಬಿ.ತಿಮ್ಮಾಪೂರ)
**ಅಬಕಾರಿ ಸಚಿವರು**

ಅನುಬಂಧ

**2024-25 ನೇ ಸಾಲಿನ ಆರ್ಥಿಕ ವರ್ಷದಲ್ಲಿ (ಜುಲೈ ರಿಂದ ನವೆಂಬರ್ ಮಾಹೆವರೆಗೆ) ಅಬಕಾರಿ ನಿಯಮ ಉಲ್ಲಂಘನೆಗಳ ವಿರುದ್ಧ ಇಲಾಖಾಧಿಕಾರಿಗಳು ನಡೆಸಿದ ದಾಳಿ, ದಾಖಲಿಸಿದ ಮೊಕದ್ದಮೆಗಳು, ದಸ್ತಗಿರಿಗೊಳಪಡಿಸಿದ ಆರೋಪಿತರ ಹಾಗೂ ವಶಪಡಿಸಿಕೊಂಡ ಮದ್ಯ ಮತ್ತು ಬಿಯರ್‌ನ ಜಿಲ್ಲಾವಾರು ವಿವರ.**

| ಕ್ರ ಸಂ | ಜಿಲ್ಲೆ | ನಡೆಸಿದ ದಾಳಿ | ದಾಖಲಿಸಿದ ಪ್ರಕರಣಗಳು | | | ಒಟ್ಟು ಪ್ರಕರಣಗಳು | ದಸ್ತಗಿರಿಗೊಳಪಡಿಸಿದ ಆರೋಪಿಗಳ ಸಂಖ್ಯೆ | ವಶಪಡಿಸಿಕೊಂಡ ಮದ್ಯ (ಲೀ. ಗಳಲ್ಲಿ) | |
|---|---|---|---|---|---|---|---|---|---|
| | | | ಘೋರ | ಕಲಂ 15-ಎ | ಬಿಎಲ್‌ಸಿ | | | ಮದ್ಯ | ಬಿಯರ್ |
| 1 | Bagalkot | 1375 | 107 | 291 | 217 | 615 | 371 | 68 | 17 |
| 2 | Vijayapura | 1699 | 78 | 365 | 174 | 617 | 470 | 332 | 74 |
| 3 | Dharwad | 1254 | 56 | 456 | 216 | 728 | 461 | 525 | 79 |
| 4 | Belagavi South | 2601 | 84 | 396 | 247 | 727 | 525 | 3,309 | 248 |
| 5 | Belagavi North | 1621 | 58 | 483 | 218 | 759 | 682 | 210 | 1 |
| 6 | Bengaluru Urban District-01 | 510 | 36 | 212 | 280 | 528 | 471 | 602 | 10,199 |
| 7 | Bengaluru Urban District-02 | 376 | 24 | 260 | 246 | 530 | 304 | 17,685 | 425 |
| 8 | Bengaluru Urban District-03 | 318 | 13 | 185 | 281 | 479 | 161 | 85 | 20 |
| 9 | Bengaluru Urban District-04 | 481 | 12 | 76 | 204 | 292 | 134 | 101 | 24 |
| 10 | Bengaluru Rural | 698 | 29 | 428 | 190 | 647 | 333 | 349 | 140 |
| 11 | Chikkaballapura | 777 | 59 | 477 | 177 | 713 | 533 | 321 | 10,194 |
| 12 | Bengaluru South | 705 | 43 | 427 | 175 | 645 | 504 | 365 | 135 |
| 13 | Tumakuru | 2293 | 110 | 1254 | 507 | 1871 | 1279 | 1,092 | 216 |
| 14 | Kolar | 1449 | 51 | 677 | 305 | 1033 | 755 | 722 | 189 |
| 15 | Bengaluru Urban District-05 | 483 | 15 | 175 | 307 | 497 | 217 | 5,595 | 30 |
| 16 | Bengaluru Urban District-06 | 695 | 11 | 335 | 348 | 694 | 353 | 97 | 12 |
| 17 | Bengaluru Urban District-07 | 526 | 23 | 152 | 259 | 434 | 45 | 160 | 74 |
| 18 | Bengaluru Urban District-08 | 602 | 18 | 372 | 336 | 726 | 420 | 12,683 | 69 |
| 19 | Chikkamagaluru | 1185 | 52 | 414 | 166 | 632 | 505 | 186 | 24 |
| 20 | Davanagere | 1007 | 48 | 632 | 350 | 1030 | 825 | 469 | 43 |
| 21 | Haveri | 908 | 20 | 498 | 82 | 600 | 463 | 434 | 65 |
| 22 | Shivamogga | 1357 | 47 | 670 | 220 | 937 | 690 | 306 | 6 |
| 23 | Ballari | 1102 | 50 | 407 | 227 | 684 | 386 | 345 | 18 |
| 24 | Chitradurga | 1409 | 45 | 548 | 187 | 780 | 630 | 431 | 27 |
| 25 | Gadag | 1229 | 30 | 472 | 202 | 704 | 467 | 275 | 15 |
| 26 | Koppal | 547 | 15 | 316 | 125 | 456 | 418 | 139 | 21 |
| 27 | Vijayanagara | 812 | 21 | 389 | 142 | 552 | 314 | 417 | 123 |
| 28 | Bidar | 1344 | 79 | 611 | 179 | 869 | 826 | 661 | 261 |
| 29 | Kalaburagi | 1367 | 78 | 707 | 281 | 1066 | 521 | 816 | 224 |
| 30 | Raichur | 1342 | 81 | 268 | 133 | 482 | 330 | 218 | 79 |
| 31 | Yadgir | 989 | 52 | 285 | 86 | 423 | 312 | 565 | 108 |
| 32 | Dakshina Kannada | 1536 | 29 | 448 | 409 | 886 | 451 | 320 | 3 |
| 33 | Kodagu | 1381 | 31 | 341 | 229 | 601 | 363 | 17,501 | 1,637 |
| 34 | Udupi | 706 | 61 | 300 | 233 | 594 | 301 | 7,506 | - |
| 35 | Uttara Kannada | 2167 | 100 | 540 | 80 | 720 | 483 | 10,110 | 64 |
| 36 | Chamarajanagara | 1434 | 54 | 582 | 143 | 779 | 593 | 2,756 | 9,018 |
| 37 | Hassan | 1270 | 65 | 462 | 419 | 946 | 791 | 1,346 | 39 |
| 38 | Mandya | 996 | 62 | 480 | 308 | 850 | 525 | 544 | 112 |
| 39 | Mysuru Urban | 944 | 40 | 261 | 271 | 572 | 276 | 7,932 | 102 |
| 40 | Mysuru Rural | 954 | 70 | 393 | 291 | 754 | 388 | 654 | 32 |
| | ಒಟ್ಟು | 44449 | 1957 | 17045 | 9450 | 28452 | 18876 | 98231 | 34167 |

ಆಇ 113 ಇಎಲ್‌ಕ್ಯೂ 2025